# ಕರ್ನಾಟಕ ರಾಜ್ಯ ವಕ್ಫ್ ಮಂಡಳಿ

**ಆಯ್ಕೆ ಪ್ರಾಧಿಕಾರಿ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ದಾರುಲ್ ಔಕಾಫ್, ನಂ.6, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು ವಿಭಾಗ, ಬೆಂಗಳೂರು–560 052.**

## ನೇಮಕಾತಿ ಅಧಿಸೂಚನೆ

**ಸಂಖ್ಯೆ: KSBW/ADM/EST/CR/458/2014-15 ಬೆಂಗಳೂರು, ದಿನಾಂಕ: 10ನೇ ಸೆಪ್ಟೆಂಬರ್,2014**

ವಿಷಯ: 2014–15ನೇ ಸಾಲಿಗಾಗಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಗ್ರೂಪ್–ಸಿ ವೃಂದದ ವಿವಿಧ ಹಂತದ ಅಧಿಕಾರಿ/ಸಿಬ್ಬಂದಿ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಆಯ್ಕೆ ಮಾಡುವ ಕುರಿತು.

ಉಲ್ಲೇಖ:1. ಸರ್ಕಾರದ ಅಧಿಸೂಚನೆ ಸಂಖ್ಯೆ: ಎಮ್.ಡಬ್ಲ್ಯೂ.ಡಿ319 ಡಬ್ಲ್ಯೂ.ಇ.ಎಸ್2011 ದಿನಾಂಕ:12–12–2013.

2. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಸಿಬ್ಬಂದಿಯ ನೇರನೇಮಕಾತಿ ಕುರಿತು ಸರ್ಕಾರದ ಅನುಮತಿ ಪತ್ರ ಸಂಖ್ಯೆ ಎಮ್.ಡಬ್ಲ್ಯೂ.ಡಿ. 27 ಡಬ್ಲ್ಯೂ.ಇ.ಎಸ್. 2014 ದಿನಾಂಕ: 15–02–2014.

3. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಸಿಬ್ಬಂದಿ ನೇರನೇಮಕಾತಿಗೆ ಸಂಬಂಧಿಸಿದಂತೆ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಹಾಗೂ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ದಿನಾಂಕ: 10–07–2014ರಂದು ಮಾಡಿಕೊಂಡಿರುವ ಒಡಂಬಡಿಕೆ.

******

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಅಂದರೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮ 2013 ನಿಯಮಗಳನ್ವಯ ಆಯ್ಕೆ ಮಾಡಲು ಈ ನೇಮಕಾತಿ ಅಧಿಸೂಚನೆ ಹೊರಡಿಸಿದೆ. ನೇಮಕಾತಿ ಅಧಿಸೂಚನೆ ದಿನಾಂಕದಂದು ಅರ್ಹರಾಗಿರುವ ಅಭ್ಯರ್ಥಿಗಳಿಂದ ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಕರೆಯಲಾಗಿದೆ. ಇತರೆ ಯಾವುದೇ ನಮೂನೆಯಲ್ಲಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

| ಕ್ರ. ಸಂ. | ಆಯ್ಕೆಗಾಗಿ ಪ್ರಕಟಿಸಿರುವ ಹುದ್ದೆಗಳು | ನೇಮಕಾತಿಗೆ ಒಳಗೊಂಡಿರುವ ಹುದ್ದೆಗಳ ಸಂಖ್ಯೆ |
|---|---|---|
| (1) | ವಕ್ಫ್ ಅಧಿಕಾರಿ (Waqf Officer) | 15 |
| (2) | ಕಾನೂನು ಸಹಾಯಕರು (Legal Assistant) | 10 |
| (3) | ಪ್ರಥಮ ದರ್ಜೆ ಸಹಾಯಕ/ ವಕ್ಫ್ ನಿರೀಕ್ಷಕರು( First Division Assistants / Waqf Inspector | 30 |
| (4) | ಲೆಕ್ಕ ಪರಿಶೋಧಕರು (Auditor) | 30 |
| (5) | ಶೀಘ್ರ ಲಿಪಿಗಾರರು(Stenographer) | 03 |
| (6) | ಸರ್ವೆಯರ್ (Surveyer) | 20 |
| (7) | ದ್ವಿತೀಯ ದರ್ಜೆ ಸಹಾಯಕರು (Second Division Assistant) | 27 |
| (8) | ಡೆಡಾ ಎಂಟ್ರಿ ಆಫರೇಟರ್ಸ್/ ಬೆರಳಚ್ಚುಗಾರರು (Data Entry Operator/ Typist) | 32 |
| (9) | ಕನ್ನಡ ಬೆರಳ ಚ್ಚುಗಾರರು | 10 |
| | ಒಟ್ಟು | 177 |

## 2. ಅಧಿಸೂಚಿತ ಹುದ್ದೆಗಳ ವರ್ಗೀಕರಣ:–

ಸರ್ಕಾರದ ಅಧಿಸೂಚನೆ ಸಂಖ್ಯೆ ಎಮ್. ಡಬ್ಲ್ಯೂ.ಡಿ/319 ಡಬ್ಲ್ಯೂ.ಇ.ಎಸ್ 2011 ದಿನಾಂಕ: 12–12–2013, ಮಂಜೂರಾದ ಹುದ್ದೆಗಳ ಪೈಕಿ ನೇರ ನೇಮಕಾತಿಗೆ ಒಳಗೊಂಡಿರುವ ಹುದ್ದೆಗಳ ವರ್ಗೀಕರಣವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಸರ್ಕಾರದ ಆದೇಶದಂತೆ ಮುಸ್ಲಿಂರಿಗೆ ಇರುವ ಮೀಸಲಾತಿಯನ್ನು ಅನುಸರಿಸಿ ಅದರಲ್ಲಿ ನಗರ, ಗ್ರಾಮೀಣ, ಮಹಿಳೆ, ಇತ್ಯಾದಿಗಳಿಗೆ ಮೀಸಲಿರಿಸುವ ವ್ಯವಸ್ಥೆಗಳ ಅನ್ವಯ ಹಾಗೂ ಂಡಿಣುಛಿಟಜ 371 (ಎ) ರಂತೆ ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಖಾಲಿ ಇರುವ ಹುದ್ದೆಗಳು ಭರ್ತಿ ಮಾಡುವ ಬಗ್ಗೆ ಮೀಸಲಾತಿ ಆದೇಶದಂತೆ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ. ಎಲ್ಲಾ ಹುದ್ದೆಗಳು ಕೇವಲ ಮುಸ್ಲಿಂರಿಗೆ ಮೀಸಲಿರಿಸಿದೆ.

I. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಖಾಲಿ ಇರುವ ವಕ್ಫ್ ಅಧಿಕಾರಿಗಳ ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಒಟ್ಟು ಹುದ್ದೆಗಳು: 15

| ಪ್ರವರ್ಗ | ಸಾಮಾನ್ಯ | ಮಹಿಳಾ | ಗ್ರಾಮೀಣ | ಅಂಗವಿಕಲರು | ಕನ್ನಡ ಮಾಧ್ಯಮ | ಮಾಜಿ ಸೈನಿಕ | ಯೋ.ಅ | ಒಟ್ಟು |
|---|---|---|---|---|---|---|---|---|
| ಸಾ.ಅಭ್ಯರ್ಥಿ | 03 | 03 | 02 | 01 | - | 01 | - | 10 |
| ಪ್ರವರ್ಗ–1 | 01 | - | - | - | - | - | - | 01 |
| ಪ್ರವರ್ಗ–2ಎ | 01 | 01 | - | - | - | - | - | 02 |
| ಪ್ರವರ್ಗ–2ಬಿ | 01 | - | - | - | - | - | - | 01 |
| 371 (ಜೆ) | 01 | - | - | - | - | - | - | 01 |
| ಒಟ್ಟು | **07** | **04** | **02** | **01** | **–** | **01** | **–** | **15** |

II. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಖಾಲಿ ಇರುವ ಕಾನೂನು ಸಹಾಯಕರು ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಒಟ್ಟು ಹುದ್ದೆಗಳು:–10

| ಪ್ರವರ್ಗ | ಸಾಮಾನ್ಯ | ಮಹಿಳಾ | ಗ್ರಾಮೀಣ | ಅಂಗವಿಕಲರು | ಕನ್ನಡ ಮಾಧ್ಯಮ | ಮಾಜಿ ಸೈನಿಕ | ಯೋ.ಅ | ಒಟ್ಟು |
|---|---|---|---|---|---|---|---|---|
| ಸಾ.ಅಭ್ಯರ್ಥಿ | 02 | 02 | 02 | 01 | - | - | - | 07 |
| ಪ್ರವರ್ಗ–1 | 01 | - | - | - | - | - | - | 01 |
| ಪ್ರವರ್ಗ–2ಎ | 01 | - | - | - | - | - | - | 01 |
| ಪ್ರವರ್ಗ–2ಬಿ | - | - | - | - | - | - | - | - |
| 371 (ಜೆ) | 01 | - | - | - | - | - | - | 01 |
| ಒಟ್ಟು | **05** | **02** | **02** | **01** | **–** | **–** | **–** | **10** |

III. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರು/ ವಕ್ಫ್‌ನಿರೀಕ್ಷಕರು ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಒಟ್ಟು ಹುದ್ದೆಗಳು:–30

| ಪ್ರವರ್ಗ | ಸಾಮಾನ್ಯ | ಮಹಿಳಾ | ಗ್ರಾಮೀಣ | ಅಂಗವಿಕಲರು | ಕನ್ನಡ ಮಾಧ್ಯಮ | ಮಾಜಿ ಸೈನಿಕ | ಯೋ.ಅ | ಒಟ್ಟು |
|---|---|---|---|---|---|---|---|---|
| ಸಾ.ಅಭ್ಯರ್ಥಿ | 05 | 07 | 05 | 01 | 01 | 02 | 01 | 22 |
| ಪ್ರವರ್ಗ–1 | 01 | - | - | - | - | - | - | 01 |
| ಪ್ರವರ್ಗ–2ಎ | 01 | 01 | 01 | 01 | - | - | - | 04 |
| ಪ್ರವರ್ಗ–2ಬಿ | 01 | - | - | - | - | - | - | 01 |
| 371 (ಜೆ) | 01 | 01 | - | - | - | - | - | 02 |
| ಒಟ್ಟು | **09** | **09** | **06** | **02** | **01** | **02** | **01** | **30** |

IV. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಖಾಲಿ ಇರುವ ಲೆಕ್ಕ ಪರಿಶೋಧಕರುಗಳ ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಒಟ್ಟು ಹುದ್ದೆಗಳು:–30

| ಪ್ರವರ್ಗ | ಸಾಮಾನ್ಯ | ಮಹಿಳಾ | ಗ್ರಾಮೀಣ | ಅಂಗವಿಕಲರು | ಕನ್ನಡ ಮಾಧ್ಯಮ | ಮಾಜಿ ಸೈನಿಕ | ಯೋ.ಅ | ಒಟ್ಟು |
|---|---|---|---|---|---|---|---|---|
| ಸಾ.ಅಭ್ಯರ್ಥಿ | 05 | 07 | 05 | 01 | 01 | 02 | 01 | 22 |
| ಪ್ರವರ್ಗ–1 | 01 | - | - | - | - | - | - | 01 |
| ಪ್ರವರ್ಗ–2ಎ | 01 | 01 | 01 | 01 | - | - | - | 04 |
| ಪ್ರವರ್ಗ–2ಬಿ | 01 | - | - | - | - | - | - | 01 |
| 371 (ಜೆ) | 01 | 01 | - | - | - | - | - | 02 |
| ಒಟ್ಟು | **09** | **09** | **06** | **02** | **01** | **02** | **01** | **30** |

V. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಖಾಲಿ ಇರುವ ಶೀಘ್ರ ಲಿಪಿಗಾರರ ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಒಟ್ಟು ಹುದ್ದೆಗಳು:–03

| ಪ್ರವರ್ಗ | ಸಾಮಾನ್ಯ | ಮಹಿಳಾ | ಗ್ರಾಮೀಣ | ಅಂಗವಿಕಲರು | ಕನ್ನಡ ಮಾಧ್ಯಮ | ಮಾಜಿ ಸೈನಿಕ | ಯೋ.ಅ | ಒಟ್ಟು |
|---|---|---|---|---|---|---|---|---|
| ಸಾ.ಅಭ್ಯರ್ಥಿ | 01 | 01 | 01 | - | - | - | - | 03 |
| ಪ್ರವರ್ಗ–1 | - | - | - | - | - | - | - | - |
| ಪ್ರವರ್ಗ–2ಎ | - | - | - | - | - | - | - | - |
| ಪ್ರವರ್ಗ–2ಬಿ | - | - | - | - | - | - | - | - |
| 371 (ಜೆ) | - | - | - | - | - | - | - | - |
| ಒಟ್ಟು | **01** | **01** | **01** | **–** | **–** | **–** | **–** | **03** |

VI. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಖಾಲಿ ಇರುವ ಸರ್ವೇಯರ್‌ಗಳ ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಒಟ್ಟು ಹುದ್ದೆಗಳು:–20

| ಪ್ರವರ್ಗ | ಸಾಮಾನ್ಯ | ಮಹಿಳಾ | ಗ್ರಾಮೀಣ | ಅಂಗವಿಕಲರು | ಕನ್ನಡ ಮಾಧ್ಯಮ | ಮಾಜಿ ಸೈನಿಕ | ಯೋ.ಅ | ಒಟ್ಟು |
|---|---|---|---|---|---|---|---|---|
| ಸಾ.ಅಭ್ಯರ್ಥಿ | 03 | 04 | 04 | 01 | 01 | 01 | - | 14 |
| ಪ್ರವರ್ಗ–1 | 01 | - | - | - | - | - | - | 01 |
| ಪ್ರವರ್ಗ–2ಎ | 01 | 01 | - | - | - | - | - | 02 |
| ಪ್ರವರ್ಗ–2ಬಿ | 01 | - | - | - | - | - | - | 01 |
| 371 (ಜೆ) | 01 | 01 | - | - | - | - | - | 02 |
| ಒಟ್ಟು | **07** | **06** | **04** | **01** | **01** | **01** | **–** | **20** |

VII. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕರ ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಒಟ್ಟು ಹುದ್ದೆಗಳು:–27

| ಪ್ರವರ್ಗ | ಸಾಮಾನ್ಯ | ಮಹಿಳಾ | ಗ್ರಾಮೀಣ | ಅಂಗವಿಕಲರು | ಕನ್ನಡ ಮಾಧ್ಯಮ | ಮಾಜಿ ಸೈನಿಕ | ಯೋ.ಅ | ಒಟ್ಟು |
|---|---|---|---|---|---|---|---|---|
| ಸಾ.ಅಭ್ಯರ್ಥಿ | 04 | 06 | 05 | 01 | 01 | 01 | 01 | 19 |
| ಪ್ರವರ್ಗ–1 | 01 | - | - | - | - | - | - | 01 |
| ಪ್ರವರ್ಗ–2ಎ | 01 | 01 | 01 | 01 | - | - | - | 04 |
| ಪ್ರವರ್ಗ–2ಬಿ | 01 | - | - | - | - | - | - | 01 |
| 371 (ಜೆ) | 01 | 01 | - | - | - | - | - | 02 |
| ಒಟ್ಟು | **08** | **08** | **06** | **02** | **01** | **01** | **01** | **27** |

VIII. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಖಾಲಿ ಇರುವ ಡೆಡಾ ಎಂಟ್ರಿ ಅಪರೇಟರ್ಸ್/ ಬೆರಳಚ್ಚುಗಾರರುಗಳ (ಇಂಗ್ಲೀಷ್) ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಒಟ್ಟು ಹುದ್ದೆಗಳು:–32

| ಪ್ರವರ್ಗ | ಸಾಮಾನ್ಯ | ಮಹಿಳಾ | ಗ್ರಾಮೀಣ | ಅಂಗವಿಕಲರು | ಕನ್ನಡ ಮಾಧ್ಯಮ | ಮಾಜಿ ಸೈನಿಕ | ಯೋ.ಅ | ಒಟ್ಟು |
|---|---|---|---|---|---|---|---|---|
| ಸಾ.ಅಭ್ಯರ್ಥಿ | 05 | 07 | 06 | 01 | 01 | 02 | 01 | 23 |
| ಪ್ರವರ್ಗ–1 | 01 | - | - | - | - | - | - | 01 |
| ಪ್ರವರ್ಗ–2ಎ | 01 | 02 | 01 | 01 | - | - | - | 05 |
| ಪ್ರವರ್ಗ–2ಬಿ | 01 | - | - | - | - | - | - | 01 |
| 371 (ಜೆ) | 01 | 01 | - | - | - | - | - | 02 |
| ಒಟ್ಟು | **09** | **10** | **07** | **02** | **01** | **02** | **01** | **32** |

IX. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಖಾಲಿ ಇರುವ ಡೇಟಾ ಎಂಟ್ರಿ ಆಪರೇಟರ್ಸ್/

ಬೆರಳಚ್ಚುಗಾರರುಗಳ (ಕನ್ನಡ) ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಒಟ್ಟು ಹುದ್ದೆಗಳು:–10

| ಪ್ರವರ್ಗ | ಸಾಮಾನ್ಯ | ಮಹಿಳಾ | ಗ್ರಾಮೀಣ | ಅಂಗವಿಕಲರು | ಕನ್ನಡ ಮಾಧ್ಯಮ | ಮಾಜಿ ಸೈನಿಕ | ಯೋ.ಅ | ಒಟ್ಟು |
|---|---|---|---|---|---|---|---|---|
| ಸಾ.ಅಭ್ಯರ್ಥಿ | 02 | 02 | 02 | 01 | - | - | - | 07 |
| ಪ್ರವರ್ಗ–1 | 01 | - | - | - | - | - | - | 01 |
| ಪ್ರವರ್ಗ–2ಎ | 01 | - | - | - | - | - | - | 01 |
| ಪ್ರವರ್ಗ–2ಬಿ | - | - | - | - | - | - | - | - |
| 371 (ಜೆ) | 01 | - | - | - | - | - | - | 01 |
| ಒಟ್ಟು | **05** | **02** | **02** | **01** | **–** | **–** | **–** | **10** |

## 3. ಆಯ್ಕೆಗೆ ಅರ್ಹತೆ:–

**ಅ)** ನೇಮಕಾತಿ ಅಧಿಸೂಚನೆ ದಿನಾಂಕದಂದು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮ 2013ರ ನಿಯಮಗಳಲ್ಲಿ ನಿಗದಿ ಪಡಿಸಿರುವ ವಿದ್ಯಾರ್ಹತೆಗಳನ್ನು ಹೊಂದಿರಬೇಕು ಮತ್ತು ನಿಗದಿಪಡಿಸಲಾದ ವಯೋಮಿತಿಯೊಳಗಿದ್ದು, ಆಯ್ಕೆ ಪ್ರಾಧಿಕಾರಿಯು ನಡೆಸುವ ವಿಭಾಗ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು. ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಮಾತ್ರಕ್ಕೆ ಅಭ್ಯರ್ಥಿಯು ಆಯ್ಕೆಗೆ ಅರ್ಹತೆ ಪಡೆಯುವುದಿಲ್ಲ. ಅಭ್ಯರ್ಥಿಯು ಇದರ ಜೊತೆಗೆ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಗಳನ್ನು ಹೊಂದಿದ್ದು ಮತ್ತು ನಿಗದಿತ ವಯೋಮಿತಿಯೊಳಗೆ ಇದ್ದಲ್ಲಿ ಮಾತ್ರ ಆಯ್ಕೆಗೆ ಪರಿಗಣಿಸಲಾಗುವುದು.

ಎಲ್ಲಾ ಹುದ್ದೆಗಳಿಗೂ ಆಂತರಿಕ ವರ್ಗಾವಣೆ ಇದ್ದು, ರಾಜ್ಯಾದ್ಯಂತ ಸಂಚರಿಸಲು, ಹಳ್ಳಿಗಾಡಿನಲ್ಲಿ ವಾಸ್ತವ್ಯ ಮಾಡಲು ಇಚ್ಚಿಸುವವರು ಮಾತ್ರ ಅರ್ಜಿ ಸಲ್ಲಿಸಬೇಕು.

**ಆ) ಸರ್ಕಾರದ ಅಧಿಸೂಚನೆ ಸಂಖ್ಯೆ** : ಎಮ್.ಡಬ್ಲ್ಯೂ..ಡಿ/ 19/ ಡಬ್ಲ್ಯೂ.ಇ.ಎಸ್,2011 ದಿನಾಂಕ: 12–12–2013ರ ನಿಯಮ 24(ಎ) (3) ರನ್ವಯ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಗ್ರೂಪ್ (ಸಿ) ಮತ್ತು ಗ್ರೂಪ್ (ಡಿ) ಹುದ್ದೆಗಳನ್ನು **ಇಸ್ಲಾಂ ಧರ್ಮ** ಅನುಸರಿಸುತ್ತಿರುವ (ಬಹಿರಂಗವಾಗಿ ಒಪ್ಪಿಕೊಂಡಿರುವ) ಅಭ್ಯರ್ಥಿಗಳಿಗೆ ಮಾತ್ರ ನೇಮಕಾತಿ ನೀಡತಕ್ಕದ್ದು ಎಂದು ಇರುವುದರಿಂದ ಸರ್ಕಾರದ ಮೀಸಲಾತಿ ನಿಯಮಗಳ ರನ್ವಯ ಕರ್ನಾಟಕ ರಾಜ್ಯ ವಕ್ಫ್

ಮಂಡಳಿಗೆ ಅನ್ವಯಿಸದೇ ಇರುವುದರಿಂದ ಹುದ್ದೆಗಳವಾರು ಜಾತಿವಾರು ಸಾಮಾನ್ಯ ಮೀಸಲಾತಿಯನ್ನು ಕಾದಿರಿಸುವುದಿಲ್ಲ.

## 4. ಆಯ್ಕೆ ಮತ್ತು ನೇಮಕಾತಿ:–

"ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳು 2013 ಹಾಗೂ ಸಂಬಂಧಿಸಿದ ಕಾಲದಿಂದ ಕಾಲಕಾಲಕ್ಕೆ ತಿದ್ದುಪಡಿಯಾದ ನಿಯಮಗಳ ಅನ್ವಯ ಮುಖ್ಯಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಬೆಂಗಳೂರು ರವರು ಆಯ್ಕೆ ಪ್ರಾಧಿಕಾರಿಯಾಗಿರುತ್ತಾರೆ.

## 5. ಅರ್ಜಿಸಲ್ಲಿಸುವ ವಿಧಾನ:–

ಅಭ್ಯರ್ಥಿಯು ಆಲ್‌ಲೈನ್ (Online) ಮೂಲಕ ಇಲಾಖೆಯ ಅಧಿಕೃತ ವೆಬ್‌ಸೈಟ್ www.schooleducation.kar.nic.in ಮುಖಾಂತರ ಅರ್ಜಿ ಸಲ್ಲಿಸಬೇಕು. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶ ಇರುವುದಿಲ್ಲ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಸಲ್ಲಿಸಿದ ನಂತರ (After submission of application) ದೊರೆಯುವ ಗಣಕೀಕೃತ ಅರ್ಜಿ ಸಂಖ್ಯೆಯನ್ನು ಪಡೆದುಕೊಳ್ಳುವುದು ಮತ್ತು ಸದರಿ ಸಂಖ್ಯೆಯನ್ನು ಕಡ್ಡಾಯವಾಗಿ ಬರೆದಿಟ್ಟುಕೊಳ್ಳತಕ್ಕದ್ದು. ಈ ಅರ್ಜಿ ಸಂಖ್ಯೆಯು ನೇಮಕಾತಿ ಪ್ರಕ್ರಿಯೆಯ ಎಲ್ಲಾ ಹಂತಗಳಿಗೆ ಅವಶ್ಯಕವಾಗಿರುತ್ತದೆ. ಆಲ್‌ಲೈನ್ ಅರ್ಜಿಯನ್ನು ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ಸ್ವೀಕೃತಿ ಪತ್ರ ಮತ್ತು ಚಲನ್ ಪ್ರತಿಗಳ ಮುದ್ರಿತ ಪ್ರತಿಗಳನ್ನು ತೆಗೆದುಕೊಳ್ಳತಕ್ಕದ್ದು. ಮುದ್ರಿತ ಚಲನ್ ಪ್ರತಿಯನ್ನು ಆಧರಿಸಿ ಪರೀಕ್ಷಾ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಯಾವುದಾದರೂ ಶಾಖೆಯಲ್ಲಿ ಪಾವತಿಸಬಹುದು. ಒಮ್ಮೆ ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಹಾಗೂ ಸದರಿ ಶುಲ್ಕವನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಈ ಕೆಳಕಂಡಂತೆ ನಿಗದಿಪಡಿಸಿದ ಅರ್ಜಿ ಶುಲ್ಕವನ್ನು ಕೊನೆಯ ದಿನಾಂಕದೊಳಗೆ ಆನ್‌ಲೈನ್ ಮೂಲಕವೆ ಪಾವತಿಸುವುದು. ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶ ಪತ್ರಗಳನ್ನು ಮೇಲೆ ನಮೂದಿಸಿರುವ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬೇಕು. ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ಅವಧಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಭ್ಯರ್ಥಿಗೆ ನೀಡಿರುವ ನೋಂದಣಿ ಸಂಖ್ಯೆ ಮತ್ತು ಇತರೆ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ನಮೂದಿಸಿ ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಕೊನೆಯ ದಿನಾಂಕದ ನಂತರ ಪಾವತಿಸಿದ ಅರ್ಜಿ ಶುಲ್ಕವನ್ನು ಪರಿಗಣಿಸಲಾಗುವುದಿಲ್ಲ ಮತ್ತು ಸ್ವೀಕರಿಸಲಾಗುವುದಿಲ್ಲ. ಅರ್ಜಿಗಳನ್ನು ಆಲ್‌ಲೈನ್ ಮೂಲಕ ಭರ್ತಿ ಮಾಡಬೇಕಾಗಿದ್ದು, ಈ ಬಗ್ಗೆ ಮಾರ್ಗಸೂಚಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

## 6. ಶುಲ್ಕ:–

1. ಎಲ್ಲಾ ಅಭ್ಯರ್ಥಿಗಳು ರೂ. 300/– ಗಳ ಶುಲ್ಕವನ್ನು ಪಾವತಿಸತಕ್ಕದ್ದು ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿಸಲ್ಲಿಸಿದ್ದಲ್ಲಿ ಪ್ರತಿ ಹೆಚ್ಚುವರಿ ಹುದ್ದೆಗೆ ರೂ. 200/–. ಪಾವತಿಸಿ ಶುಲ್ಕವನ್ನು ಹೆಚ್ಚುವರಿಯಾಗಿ ಪಾವತಿಸಬೇಕು.

**ಉದಾ:–** ಒಬ್ಬ ಅಭ್ಯರ್ಥಿ ವಕ್ಫ್ ಅಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಶುಲ್ಕ ರೂ. 300 ಆಗಿರುತ್ತದೆ, ಅದೇ ಅಭ್ಯರ್ಥಿ ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಅರ್ಜಿಸಲ್ಲಿಸಿದ್ದಲ್ಲಿ ಶುಲ್ಕ ರೂ. 300/– + ರೂ. 200/– = ರೂ. 500/– ಆಗುತ್ತದೆ.

## 7. ಅರ್ಜಿ ಸಲ್ಲಿಸುವ ಅವಧಿ;–

ಅರ್ಜಿಯನ್ನು ದಿನಾಂಕ: 12–09–2014 ರಿಂದ 29–09–2014 ರವರೆಗೆ ನಿಗಧಿತ ಅವಧಿಯಲ್ಲಿ ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸಬೇಕು.

## 8. ವಿದ್ಯಾರ್ಹತೆಗಳು:–

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು 2013ರನ್ವಯ ವಿವಿಧ ವೃಂದದ ಹುದ್ದೆಗಳಿಗೆ ಹೊಂದಿರಬೇಕಾದ ವಿದ್ಯಾರ್ಹತೆಗಳ ವಿವರಗಳು ಈ ಮುಂದೆ ತಿಳಿಸಿದಂತಿರುತ್ತದೆ.

| ಕ್ರ.ಸಂ. | ಹುದ್ದೆಯ ಪ್ರವರ್ಗ | ವೇತನ ಶ್ರೇಣಿ | ಕನಿಷ್ಠ ವಿದ್ಯಾರ್ಹತೆ |
|---|---|---|---|
| **01.** | **ವಕ್ಫ್ ಅಧಿಕಾರಿ** | 20000-500-21000-600-24600-700-28800-800-33600-900-36300 | ಮಾನ್ಯತೆ ಪಡೆದಿರುವ ಅಂಗೀಕೃತ ವಿಶ್ವ ವಿದ್ಯಾನಿಲಯ ದಿಂದ ಪಡೆದಿರುವ ಪದವಿದರರಾಗಿರಬೇಕು. |
| **02.** | ಕಾನೂನು ಸಹಾಯಕರು | 20000-500-21000-600-24600-700-28800-800-33600-900-36300 | ದಿವಾಣಿ ವ್ಯವಹಾರಗಳಲ್ಲಿ ಕನಿಷ್ಠ 3 ವರ್ಷಗಳ ಅನುಭವ ಹೊಂದಿರುವ ಕಾನೂನು ಪದವಿದಾರರಾಗಿರಬೇಕು. |
| 03. | ಪ್ರಥಮ ದರ್ಜೆ ಸಹಾಯಕ/ ವಕ್ಫ್ ನಿರೀಕ್ಷಕರು | 14550-350-15600-400-17200-450-19000-50021000-600-24600-700-26700. | ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪಡೆದಿರುವ ಪದವಿದರರಾಗಿರಬೇಕು. |
| 04. | ಲೆಕ್ಕ ಪರಿಶೋಧಕರು | 14550-350-15600-400-17200-450-19000-500-21000-600-24600-700-26700. | ಅಂಗೀಕೃತ ವಿಶ್ವವಿದ್ಯಾನಿಲಯದಿಂದ ವಾಣಿಜ್ಯ ಶಾಸ್ತ್ರದಲ್ಲಿ ಪಡೆದಿರುವ ಪದವಿದರರಾಗಿರಬೇಕು. |
| 05. | ಶೀಘ್ರ ಲಿಪಿಗಾರರು | 14550-350-15600-400-17200-450-19000-50021000-600-24600-700-26700. | ಪ್ರೌಢದರ್ಜೆಯ ಆಂಗ್ಲ ಮತ್ತು ಕನ್ನಡ ಶೀಘ್ರ ಲಿಪಿಗಾರರು/ಗಣಕಯಂತ್ರದ ಡಿಪ್ಲೋಮೊದಾರರು/ ಪದವಿ ಪೂರ್ವ ಶಿಕ್ಷಣದಲ್ಲಿ ತೇರ್ಗಡೆ ಹೊಂದಿದವರಾಗಿರಬೇಕು. |
| 06. | ಸರ್ವೆಯರ್ | 14550-350-15600-400-17,200-450-19000-500-21000-600-24600-700-26700. | ಸಿವಿಲ್ ಇಂಜಿನೀಯರಿಂಗ್ ನಲ್ಲಿ ತೇರ್ಗಡೆ ಹೊಂದಿರಬೇಕು. ಲೈಸೆನ್ಸ್‌ದಾರರಿಗೆ ಆದ್ಯತೆ ನೀಡಲಾಗುವುದು. |
| 07. | ದ್ವಿತೀಯ ದರ್ಜೆ ಸಹಾಯಕರು | 11600-200-12000-250-13000-300-14,200-350-15,600-400-17200-450-19000-500-21000 | ಪದವಿ ಪೂರ್ವ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು/ ತತ್ಸಮಾನದ ಪರೀಕ್ಷೆ, ಮತ್ತು ಗಣಕಯಂತ್ರದ ಜ್ಞಾನ ಹೊಂದಿರಬೇಕು. |
| 08. | ಡೇಟಾ ಎಂಟ್ರಿ ಆಪರೇಟರ್ಸ್ / ಬೆರಳಚ್ಚುಗಾರರು (ಇಂಗ್ಲೀಷ್) ಬೆರಳಚ್ಚುಗಾರರು (ಕನ್ನಡ) | 11600-200-12000-250-13000-300-14200-350-15600-400-17200-450-19000-500-21000 | ಸರ್ಕಾರದಿಂದ ಮಾನ್ಯತೆ ಹೊಂದಿರುವ ವಿದ್ಯಾ ಸಂಸ್ಥೆಯಲ್ಲಿ ಪ್ರೌಢದರ್ಜೆಯ ಆಂಗ್ಲ ಅಥವಾ ಕನ್ನಡ ಬೆರಳಚ್ಚು ಪ್ರಮಾಣ ಪತ್ರವನ್ನು ಹೊಂದಿರುವವರು. ಗಣಕಯಂತ್ರದ ಡಿಪ್ಲೋಮೊದಾರರು, ಪದವಿ ಪೂರ್ವ ಶಿಕ್ಷಣದಲ್ಲಿ ತೇರ್ಗಡೆ ಹೊಂದಿದವರಾಗಿರಬೇಕು.. |

**09. ವಯೋಮಿತಿ:–**

ಅಭ್ಯರ್ಥಿಗಳು ಈ ನೇಮಕಾತಿ ಅಧಿಸೂಚನೆ ದಿನಾಂಕದಂದು ಮುಂದೆ ತಿಳಿಸಿರುವ ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯೊಳಗಿರಬೇಕು.

ಕನಿಷ್ಠ: 18 ವರ್ಷಗಳು ತುಂಬಿರಬೇಕು.

ಗರಿಷ್ಠ; ಮೀಸಲಾತಿ ನಿಯಮಗಳಲ್ಲಿ ನಿಗದಿಪಡಿಸಿರುವಂತೆ ವರ್ಷಗಳು ಮೀರಿರಬಾರದು.

**10. ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ:–** ಆಯ್ಕೆ ಬಯಸುವ ಪ್ರತಿ ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಥಮ ಹಾಗೂ ದ್ವಿತೀಯ ಪತ್ರಿಕೆಯ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.

**11. ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ ಬಗ್ಗೆ ವಿವರಗಳು:–**

(i) ಪರೀಕ್ಷೆಯ ಹೆಸರು :- ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿಗೆ ನಡೆಸುವ ವಿಭಾಗೀಯ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ.

(ii) ಪರೀಕ್ಷೆ ನಡೆಸುವ ಪ್ರಾಧಿಕಾರ:– ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

(iii) ಪರೀಕ್ಷೆಯ ಅವಧಿ ಮತ್ತು ಸಮಯ

| Date | Session 1 | Session 2 | Session 3 |
|---|---|---|---|
| | (9 AM To 11 AM)<br>2 Hours | (12 Noon To 2 PM)<br>2 Hours | (3.30 PM To 5.30 PM)<br>2 Hours |
| | 100 Marks | 100 Marks | 100 Marks |
| Day 1 | Paper 1 | Paper 1 | Paper 2 |
| | For Waqf Officer, Legal Assistant, FDA/Waqf Inspector, Auditor, Surveryor | For SDA, Stenographers, DEO/ Typiest. | For the posts of Surveyor |
| Day 2 | Paper 2 | Paper 2 | Paper 2 |
| | For the posts of Waqf Officer,Waqf Inspector / FDA | For the posts of Auditor | For the of Legal Assistant |
| Day 3 | Paper 2 | Paper 2 | Paper 2 |
| | For the Posts of SDA | For the Posts of DEO/Typiest | For the posts of Stenographers |

(iv ) **ಪರೀಕ್ಷಾ ಮಾಧ್ಯಮ;- ಕನ್ನಡ ಮತ್ತು ಆಂಗ್ಲ ಮಾಧ್ಯಮ.**

(v) **ಪ್ರಶ್ನೆ ಪತ್ರಿಕೆ, ಅಂಕಗಳು ಮತ್ತು ವಿಷಯ:-** ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕೆಳಕಂಡ ವಿಷಯಗಳನ್ನೊಳಗೊಂಡ ಪರೀಕ್ಷಾ ವಿಷಯಗಳು ಎರಡು ಪ್ರಶ್ನೆ ಪತ್ರಿಕೆಗಳನ್ನು ಹೊಂದಿರುತ್ತದೆ.

<table>
<tr><th rowspan="2">ಕ್ರ.ಸಂ.</th><th rowspan="2">ಹುದ್ದೆಯ ಹೆಸರು</th><th colspan="2">ವಿಷಯ</th><th rowspan="2">ಅಂಕಗಳು</th></tr>
<tr><th>ಪ್ರಥಮ ಪತ್ರಿಕೆ</th><th>ದ್ವಿತೀಯ ಪತ್ರಿಕೆ.</th></tr>
<tr><td rowspan="2">01.</td><td rowspan="2">Waqf Officer, Legal Assistant, FDA/Waqf Inspector, Auditor Surveyor</td><td colspan="2">Paper-I<br>(i) General Knowledge:- This normally conform to the minimum standard relating to General Knowledge expected of a student who has passed Degree and will cover topics relating to Constitution of India, Indian History and Culture, General and Economic Geography of India, every day science and such matters of every day observation as may be expected of an educated person.<br>(ii) General English: This normally conform to the minimum standard relating to English, expected of a student who has passed Degree will cover topics such as relating to grammar. Vocabulary, spelling, Synonyms, his power to understand and comprehend English language and his ability to discriminate between correct and incorrect usage, etc.<br>(iii) General Mental Ability:- This normally conform to the minimum standard relating to General Mental Ability expected of a student who has passed PUC/12th standard examination.<br>(iv) Current Affairs.</td><td>100</td></tr>
<tr><td colspan="2">Paper-II<br>(i) For the posts of Waqf Officer/Waqf Inspector/FDA: the question paper includes Waqf Act 1995 & Waqf (Amendment) Act 2013 and RTI Act.<br>(ii) For the posts of surveyor:- The Question paper includes Knowledge of Survey.<br>(iii) For the Posts of Auditor:- The question paper includes the knowledge of Auditing.<br>(iv) For the post of Leagal Assistant:- The question paper be includes Waqf Act 1995, Waqf (Amendment) Act 2013 and Civil procedure Code.</td><td>100</td></tr>
</table>

| | | | |
|---|---|---|---|
| 02. | SDA/Stenographers DEO/Typist. | **Paper-I**<br>(i) General Knowledge: This normally conform to the minimum standard relating to General Knowdedge expected of a student who has passed PUC/$12^{th}$ standard examination and will cover topics relating to constitution of India, Indian History and culture, General and Economic Geography of India every day science and such matters of every day observation as may be expected of an educated person.<br><br>(ii) General English: This normally conform to the minimum standard relating to English , expected of a student who has passed PUC/$12^{th}$ standard examination and will cover topics such as relating to grammar, vocabulary , spelling, synonyms, antonyms, his power of understand ad comprehend English language and his ability to discriminate between correct and incorrect usage, etc.<br>(iii) General Mental Ability: This normally conform to the minimum standard relating to General Mental Ability expected of a student who has passed PUC/$12^{th}$ standard examination .<br>(iv) Current Affairs.<br><br>**Paper-II**<br>(i) For the posts of SDA: The question paper shall include Waqf Act 1995 and Waqf (Amendment) Act 2013.<br><br>(ii) For the posts of Stenographers: The question paper includes knowledge of computers and secretarial practice.<br>(iii) For the posts of DEO/ Typists: The question paper includes knowledge of typing and computers. | 100<br><br>100 |

(vii) **ಪ್ರಶ್ನೆಗಳ ವ್ಯಾಪ್ತಿ ಮತ್ತು ಸ್ವರೂಪ:–**

1. ಪ್ರಶ್ನೆಗಳು ನಿಗದಿಪಡಿಸಲಾಗಿರುವ ಪಠ್ಯ ವಸ್ತುವಿನ ವ್ಯಾಪ್ತಿಯಲ್ಲಿರುತ್ತದೆ.
2. ಪ್ರಶ್ನೆಗಳು ವಸ್ತುನಿಷ್ಠವಾಗಿದ್ದು ಪ್ರತಿ ಪ್ರಶ್ನೆಗೆ ಒಂದು ಅಂಕ ನಿಗದಿಪಡಿಸಿದೆ.
3. ಪ್ರತಿ ಪ್ರಶ್ನೆಗೆ 4 ಉತ್ತರಗಳನ್ನು ಹೊಂದಿದ್ದು ಇವುಗಳಲ್ಲಿ ಒಂದು ಸರಿ ಉತ್ತರವಾಗಿರುತ್ತದೆ.
4. ಉತ್ತರಗಳನ್ನು "ಓ. ಎಂ. ಆರ್" ಶೀಟಿನಲ್ಲಿ ಗುರ್ತಿಸುವುದು.

ಪರೀಕ್ಷಾ ವಿಷಯಗಳ ಪ್ರಶ್ನೆ ಪತ್ರಿಕೆಗಳು: **ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿರುತ್ತವೆ.**

## 12. ಆಯ್ಕೆ ವಿಧಾನ:–

ಅಭ್ಯರ್ಥಿಗಳನ್ನು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮ 2013 ನಿಯಮಗಳ ಅನ್ವಯ ಮೆರಿಟ್ ಮತ್ತು ಕರ್ನಾಟಕ ಸರ್ಕಾರದ ಪ್ರಚಲಿತ ಮೀಸಲಾತಿ ನಿಯಮಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

**13. ಅರ್ಹತೆ ನಿರ್ಧರಿಸುವುದು;–**

* ಹುದ್ದೆಗೆ ನಿಗದಿಪಡಿಸಿರುವ ಅಭ್ಯರ್ಥಿಯು ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇಕಡಾವಾರು ಅಂಕಗಳನ್ನು ಲೆಕ್ಕ ಹಾಕಲಾಗುವುದು.
* ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇಕಡಾ ಅಂಕಗಳನ್ನು ಲೆಕ್ಕ ಹಾಕಲಾಗುವುದು.
* ಹುದ್ದೆಗೆ ನಿಗದಿಪಡಿಸಿರುವ ಅರ್ಹತಾ ಪರೀಕ್ಷೆಯ ಶೇಕಡಾ ಅಂಕಗಳು + ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಶೇಕಡಾ ಅಂಕಗಳು ಇವುಗಳ ಸರಾಸರಿ ಶೇಕಡಾ ಅಂಕಗಳನ್ನು ಲೆಕ್ಕ ಹಾಕಲಾಗುವುದು.
* ಆಯ್ಕೆಯಾಗುವ ಅಭ್ಯರ್ಥಿಗಳು ಅರ್ಹತೆ ಹೊಂದಲು ಪತ್ರಿಕೆ–1 ಮತ್ತು ಪತ್ರಿಕೆ–2 ರಲ್ಲಿನ ಪರೀಕ್ಷೆಗಳಲ್ಲಿನ ಒಟ್ಟು ಅಂಕಗಳಿಗೆ ಕನಿಷ್ಠ 50% ಅಂಕಗಳನ್ನು ಪಡೆಯಲೇಬೇಕು.

**14) ಜಾತಿ/ ಮೀಸಲಾತಿ ಪ್ರಮಾಣ ಪತ್ರಗಳು:-**

ಮೀಸಲಾತಿ ಕೊರಬಯಸುವ ಅಭ್ಯರ್ಥಿಗಳು:–

ಎ.) ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ 'ಇ' ರಲ್ಲಿ ಮತ್ತು ಪ್ರವರ್ಗ–2ಎ, 2ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ನಮೂನೆ 'ಎಫ್' ರಲ್ಲಿ ಅರ್ಜಿ ಸಲ್ಲಿಸಲು ನೇಮಕಾತಿ ಅಧಿಸೂಚನೆ ದಿನಾಂಕದೊಳಗೆ ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಆಯ್ಕೆ ಪ್ರಾಧಿಕಾರವು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ನಿಯಮಾನುಸಾರ ಸಾಮಾನ್ಯ ಅರ್ಹತೆಯಡಿಯಲ್ಲಿ ಪರಿಗಣಿಸಲಾಗುವುದು. (ಈ ಪ್ರಮಾಣ ಪತ್ರಗಳ ನಮೂನೆಗಳನ್ನು ತೋರಿಸಲಾಗಿದೆ).

ಆ) ಮೇಲೆ ವಿವರಿಸಿರುವ ಪ್ರಕಾರ ಸಾಮಾನ್ಯ ಅರ್ಹತೆ ಸೇರಿದಂತೆ ಪ್ರತಿ ಮೀಸಲಾತಿ ಪ್ರವರ್ಗಗಳಿಗೆ ಈ ಕೆಳಕಂಡ ಆದೇಶಗಳ ಪ್ರಕಾರ " ಸಮತಳ ಮೀಸಲಾತಿ" ಅನ್ವಯ ಹುದ್ದೆಗಳನ್ನು ವರ್ಗೀಕರಿಸಲಾಗಿದೆ.

| | | | |
|---|---|---|---|
| 1. | ಮಾಜಿ ಸೈನಿಕರಿಗೆ | ಶೇಕಡ 10 | ಕರ್ನಾಟಕ ಸಿವಿಲ್ ಸರ್ವೀಸಸ್ (ಜನರಲ್ ರೆಕ್ರೂಟ್‌ಮೆಂಟ್) ರೂಲ್ಸ್ 1977ರ ನಿಯಮ 9(1)ರ ಅನ್ಯಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿ.ಆಸುಇ 97 ಸೇನೆನಿ 2002 ದಿನಾಂಕ: 22–11–2002 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 53/ಸೇನೆನಿ/2007 ದಿನಾಂಕ: 04–01–2008. |
| 2. | ಅಂಗವಿಕಲರಿಗೆ | ಶೇಕಡ 5 | ಕರ್ನಾಟಕ ಸಿವಿಲ್ ಸರ್ವೀಸಸ್ (ಜನರ್ ರಿಕ್ರೂಟ್ ಮೆಂಟ್) ರೂಲ್ಸ್ 1977 ನಿಯಮ 9(1)(ಎ)ರ ಅನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ: 22–11–2002 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 53/ಸೇನೆನಿ/2007 ದಿನಾಂಕ: 04–01–2008. |
| 3. | ಮಹಿಳಾ ಅಭ್ಯರ್ಥಿಗಳಿಗೆ | ಶೇಕಡ 30 | ಕರ್ನಾಟಕ ಸಿವಿಲ್ ಸರ್ವೀಸಸ್ (ಜನರ್ ರಿಕ್ರೂಟ್ ಮೆಂಟ್) ರೂಲ್ಸ್ 1977 ನಿಯಮ 9(1)(ಬಿ)ರ ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ: 22–11–2002 ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ 16/ಸೇನೆನಿ/2008 ದಿನಾಂಕ: 01–09–2008 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 53/ಸೇನೆನಿ/2007, ದಿನಾಂಕ: 04–01–2008. |
| 4. | ಯೋಜನೆಗಳಿಂದ ನಿರಾಶ್ರಿತರಾದವರ ಕುಟುಂಬದವರ ಅಭ್ಯರ್ಥಿಗಳಿಗಾಗಿ | ಶೇಕಡ 5 | ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಆರ್ 23 ಎಸ್.ಆರ್.ಆರ್ 99 ದಿನಾಂಕ: 23–11–2000 ಮತ್ತು ಸರ್ಕಾರದ ಆದೇಶದ ಸಂಖ್ಯೆ:ಸಿಆಸುಇ 97 ಸೇನೆನಿ 2002 ದಿನಾಂಕ: 22–11–2002 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 53/ಸೇನೆನಿ/2007 ದಿನಾಂಕ: 04–01–2008. |
| 5. | ಗ್ರಾಮೀಣ ಅಭ್ಯರ್ಥಿಗಳಿಗೆ | ಶೇಕಡ 5 | 2000ದ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ ನೇಮಕಾತಿ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ) ಹಾಗೂ ಸರಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ: 22–11–2002 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 53/ಸೇನೆನಿ/2007, ದಇನಾಂಕ: 04–01–2008. |

| | | | |
|---|---|---|---|
| 6. | ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ | ಶೇಕಡ 5 | ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಆರ್ 71 ಎಸ್.ಆರ್.ಆರ್ 2001 ದಿನಾಂಕ: 24–10–2002 ಮತ್ತು ಸರ್ಕಾರದ ಆದೇಶದ ಸಂಖ್ಯೆ:ಸಿಆಸುಇ 97 ಸೇನೆನಿ 2002 ದಿನಾಂಕ: 22–11–2002 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 53/ಸೇನೆನಿ/2007 ದಿನಾಂಕ: 04–01–2008. |

ಮೇಲ್ಕಂಡ ಮೀಸಲಾತಿ ಪ್ರಮಾಣ ಪತ್ರಗಳು ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರವಿರಬೇಕು ಮತ್ತು ಅವಧಿ ಮೀರಿದ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.

**15. ಮಾಜಿ ಸೈನಿಕ ಅಭ್ಯರ್ಥಿಗಳು:–**

" ಮಾಜಿ ಸೈನಿಕ"ರಿಗಾಗಿ ಮೀಸಲಿಟ್ಟ ಖಾಲಿ ಹುದ್ದೆಗಳನ್ನು ಮಿಲಿಟರಿ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿಗಳಿಂದ ಮತ್ತು ಭಾರತ ದೇಶದ ಒಕ್ಕೂಟದ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ಅಂಗಹೀನರಾದ ವ್ಯಕ್ತಿಗಳ ಕುಟುಂಬದ ಸದಸ್ಯರಿಂದ ನೇಮಕಾತಿ ಮೂಲಕ ತುಂಬಲಾಗುತ್ತದೆ.

**ಮಾಜಿ ಸೈನಿಕರ ಗುಂಪಿನಲ್ಲಿ ಕೆಳಕಂಡವರು ಆಯ್ಕೆಗೆ ಅರ್ಹರು:–**

1. ಮಾಜಿ ಸೈನಿಕ ಎಂದರೆ ಸಶಸ್ತ್ರ ದಳಗಳಾದ ನಿಯಮಿತ ಭೂದಳ, ನೌಕಾದಳ, ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಅಯೋಧನಾಗಿ) ಸೇವೆ ಸಲ್ಲಿಸಿದ ವ್ಯಕ್ತ ಅಂದರೆ:–

(ಅ)ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ ವ್ಯಕ್ತಿ.

(ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಗೆ ಅನರ್ಹನಾದವನೆಂದೋ ಅಥವಾ ವ್ಯಕ್ತಿಯ ಹಿಡಿತಕ್ಕೂ ಮಿರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಿಂದ ಬಡುಗಡೆಯಾದ ವ್ಯಕ್ತಿ.

**ಅಥವಾ**

(ಇ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

(ಈ) ತನ್ನ ಸ್ವಂತ ಕೋರಿಕೆಯ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ.

2. ಮಾಜಿ ಸೈನಿಕ ಅವಲಂಬಿತರ ಗುಂಪಿನಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು ಅಂದರೆ:–

ಕೇಂದ್ರ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂಬಂಧಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮಾಜಿ ಸೈನಿಕರ ಅವಲಂಬಿತರಡಿಯಲ್ಲಿ ಮೀಸಲಾತಿಗೆ ಅರ್ಹರಾಗಿರುತ್ತಾರೆ ಆದರೆ ಅಂತಹವರಿಗೆ ವಯೋಮಿತಿ ಸಡಿಲಿಕೆ ಇಲ್ಲ).

3) ಮಾಜಿ ಸೈನಿಕ ಗುಂಪಿನಲ್ಲಿ ಆಯ್ಕೆ ಹೊಂದಲು ಈ ಕೆಳಕಂಡವರು ಅರ್ಹರಲ್ಲ.

ಅ) ಈ ಸೌಲಭ್ಯಕ್ಕೆ ಡಿಫೆನ್ಸ್ ಸೆಕ್ಯುರಿಟಿ ಕೋರ್ಸ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಕೋರ್ಸ್ ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದೆ ವ್ಯಕ್ತಿ ಅರ್ಹರಲ್ಲ.

ಆ) ಕೇಂದ್ರ ಸಶಸ್ತ್ರದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಪುನರ್ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ, ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗೆ ನೇಮಕ ಹೊಂದುವಂತಿಲ್ಲ.

**ಸೂಚನೆ:–**

''ಮಾಜಿ ಸೈನಿಕ'' ''ಸಶಸ್ತ್ರ ದಳದ ಸದಸ್ಯ'' ಮತ್ತು ''ಕುಟುಂಬದ ಸದಸ್ಯ'' ಎಂಬ ಪದಗಳ ಅರ್ಥವು ಕಾಲದಿಂದ ಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ರಾಜ್ಯ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರಲ್ಲಿ ವಿವರಿಸಿರುವಂತೆ ಇರುತ್ತದೆ.

**16. ವಿಕಲಚೇತನ ಅಭ್ಯರ್ಥಿಗಳು;–**

ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಎಂ.ಎಂ. ಡಬ್ಲ್ಯೂ 107, ಪಿಹೆಚ್‌ಪಿ 2003 ದಿನಾಂಕ: 11–07–2003 ಮತ್ತು ಡಿಪಿಎಆರ್ 50 ಎಸ್‌ಆರ್‌ಆರ್ 2000 ದಿನಾಂಕ:03–09–2005ರ ಅನ್ವಯ ತಾನು ''ಅಂಗವಿಕಲರ ಗುಂಪಿಗೆ ಸೇರಿದವರೆಂದು ಹೇಳಿಕೊಳ್ಳುವ ಅಭ್ಯರ್ಥಿಯು'' ವೈದ್ಯಕೀಯ ಪ್ರಮಾಣ ಪತ್ರವನ್ನು ಹೊಂದಿರಬೇಕು ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್.ಸಿಆಸುಇ 50 ಎಸ್.ಆರ್.ಆರ್. 2007, ದಿನಾಂಕ: 26–07–2011ರಲ್ಲಿ ನಿಗದಿಪಡಿಸಿರುವ ಅಂಗವಿಕಲ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆಃ ಸಿಆಸುಇ 115 ಸೆನೆನಿ 2005 ದಿನಾಂಕಃ 19.11.2005 ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ವಿಕಲಚೇತನ ಬಗ್ಗೆ ಪ್ರಮಾಣ ಪತ್ರವನ್ನು ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಈ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಅಭ್ಯರ್ಥಿಯು ಪಡೆದುಕೊಂಡಿರಬೇಕು.

**17. ಗ್ರಾಮೀಣ ಅಭ್ಯರ್ಥಿಗಳು:–**

ಗ್ರಾಮೀಣ ಅಭ್ಯರ್ಥಿ ಎಂದರೆ ಕರ್ನಾಟಕ ಪೌರ ನಿಯಮಗಳ ಅಧಿನಿಯಮ 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964ರಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶ ಹೊರತಾಗಿ ಇತರೆ ಯಾವುದೇ ಪ್ರದೇಶದಲ್ಲಿರುವ ಶಾಲೆಯಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರಿಗೆ ವ್ಯಾಸಂಗ ಮಾಡಿದ ಅಭ್ಯರ್ಥಿ.

ಗ್ರಾಮೀಣ ಅಭ್ಯರ್ಥಿಗಳ ಮೀಸಲಾತಿ ಅಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಸರಕಾರದ ಆದೇಶ ಸಂಖ್ಯೆ: ಡಿಪಿಎಆರ್ 96 ಸೇನೆನಿ 2005 ದಿನಾಂಕ: 10–08–2005ರಲ್ಲಿ ನೀಡಿರುವ ನಿಗದಿತ ನಮೂನೆಯಲ್ಲಿ ಮಾತ್ರ ಸಲ್ಲಿಸಬೇಕು.

**18. ಯೋಜನಾ ನಿರಾಶ್ರಿತ ಕುಟುಂಬದ ಅಭ್ಯರ್ಥಿಗಳು:–**

ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್.23. ಎಸ್ ಆರ್ ಆರ್ 99, ಬೆಂಗಳೂರು ದಿನಾಂಕ: 23–11–2000 ರನ್ವಯ ಯೋಜನಾ ನಿರಾಶ್ರಿತ ಕುಟುಂಬದ ಅಭ್ಯರ್ಥಿ ಮೀಸಲಾತಿ ಪಡೆಯಲಿಚ್ಚಿಸುವ ಅಭ್ಯರ್ಥಿಗಳು ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿ.ಆ.ಸು.ಇ.:4: ಸೇನೇನಿ ದಿನಾಂಕ: 27–07–2001ರಲ್ಲಿ ನಿಗದಿಪಡಿಸಲಾದ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ (ತಹಸೀಲ್ದಾರ್) ಅರ್ಜಿ ಸಲ್ಲಿಸುವ ಕೊನೆ ದಿನಾಂಕದೊಳಗೆ ಪಡೆದಿರಬೇಕು.

**19. ಕನ್ನಡ ಮಾಧ್ಯಮದ ಅಭ್ಯರ್ಥಿಗಳು:–**

1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳು ಈ ಮೀಸಲಾತಿಗೆ ಅರ್ಹರಾಗಿರುತ್ತಾರೆ. (1ನೇ ತರಗತಿಗೆ ದಾಖಲಾಗದೇ ನೇರವಾಗಿ ನಂತರದ ಹೆಚ್ಚಿನ ತರಗತಿಗೆ ದಾಖಲಾಗಿ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದಲ್ಲಿ ಸಹ ಈ ಸೌಲಭ್ಯಕ್ಕೆ ಅರ್ಹರಾಗುವರು) ಈ ಅಭ್ಯರ್ಥಿಗಳು ಸಂಬಂಧಿಸಿದ ಮುಖ್ಯೋಪಾಧ್ಯಾಯರಿಂದ ದೃಢೀಕೃತ ಪ್ರಮಾಣ ಪತ್ರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳವರ ಮೇಲು ಸಹಿಯೊಂದಿಗೆ ಸಲ್ಲಿಸತಕ್ಕದ್ದು, ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

ಈ ಪ್ರಕ್ರಿಯೆಯನ್ನು ಪ್ರಕಟಿತ ವಿಷಯವಾರು ಹುದ್ದೆಗಳ ಸಂಖ್ಯೆಗನುಗುಣವಾಗಿ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿ, ಅರ್ಹತೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳು ಲಭ್ಯವಾಗುವವರೆಗೆ ಮುಂದುವರೆಸಲಾಗುವುದು ಇದನ್ನು ಆಧರಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಆಕ್ಷೇಪಗಳನ್ನು ಆಹ್ವಾನಿಸಲಾಗುವುದು.

**20. ಅಂತಿಮ ಆಯ್ಕೆ ಪಟ್ಟಿ:-**

(i) ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಆಯ್ಕೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳ ಮೂಲ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ದೃಢಪಡಿಸಿಕೊಂಡ ನಂತರ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗುವುದು. ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗೆ ಸಲ್ಲಿಸದೇ ಇರುವ ಅಭ್ಯರ್ಥಿಗಳು ಅಂತಿಮ ಆಯ್ಕೆಪಟ್ಟಿಯಲ್ಲಿ ಪರಿಗಣನೆಗೆ ಬರುವುದಿಲ್ಲ.

(ii) ಅಂತಿಮ ಆಯ್ಕೆಪಟ್ಟಿ ತಯಾರಿಸುವಾಗ ಮಹಿಳೆಯರಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಹಿಳಾ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು. ಮಾಜಿ ಸೈನಿಕರಿಗಾಗಿ ಮೀಸಲಿರಿಸಿದ ರಿಕ್ತ ಸ್ಥಾನಗಳೀಗೆ ಅರ್ಹ ಮಾಜಿ ಸೈನಿಕ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು. ಇದೇ ರೀತಿ ಯೋಜನಾ ನಿರಾಶ್ರಿತ/ ಕನ್ನಡ ಮಾಧ್ಯಮದ/ ಗ್ರಾಮೀಣ ಅರ್ಹ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ಪ್ರವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು ಅರ್ಹ ಅಂಗವಿಕಲ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

**21. ಅಭ್ಯರ್ಥಿಗಳ ಮಾಹಿತಿ ಸಂಬಂಧ ಆಕ್ಷೇಪಣೆ ಸ್ವೀಕರಿಸಿ ದಾಖಲಿಸುವುದು:-**

Prescribed **Basic Qualification and Combined Competetive Examination (CCE)** 50:50ರ ಅನುಪಾತದಲ್ಲಿ ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳು, ಆಯಾ ಹುದ್ದೆಗಳಿಗೆ ನಿಗದಿಪಡಿಸಿರುವ ಅರ್ಹದಾಯಕ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳು ಹಾಗೂ ಅಭ್ಯರ್ಥಿಯು ಅರ್ಜಿಯಲ್ಲಿ ಕ್ಲೇಮ್ ಮಾಡಿರುವ ಮೀಸಲಾತಿ ವಿವರಗಳನ್ನು ಒಳಗೊಂಡ ಪೂರ್ಣ ಮಾಹಿತಿಯನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳ ವಿವರಗಳನ್ನು ಅಂದರೆ ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳು, ಅರ್ಹತಾದಾಯಕ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳು ಹಾಗೂ ಆನ್‌ಲೈನ್ ಅರ್ಜಿಯಲ್ಲಿ ಕ್ಲೇಮ್ ಮಾಡಿರುವ ಮೀಸಲಾತಿ ವಿವರಗಳನ್ನು ಒಳಗೊಂಡ ಪೂರ್ಣ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಿ ನಿಗದಿತ ಸಮಯ ನೀಡಿ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಸಲಾಗುವುದು. ಅಭ್ಯರ್ಥಿಯು ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿ ದಾಖಲಿಸಿದ ಶೈಕ್ಷಣಿಕ ಮಾಹಿತಿಯಲ್ಲಿ ವ್ಯತ್ಯಾಸವಾಗಿದ್ದಲ್ಲಿ ಮಾತ್ರ ನಿಗದಿತ ನಮೂನೆಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬೇಕಾಗುತ್ತದೆ. ಆದರೆ ಮೂಲ ಅರ್ಜಿಯಲ್ಲಿ ದಾಖಲಿಸದಿರುವ ಯಾವುದೇ ಮಾಹಿತಿಯನ್ನು ಪರಿಗಣಿಸಲಾಗುವುದಿಲ್ಲ. ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಅಭ್ಯರ್ಥಿಗಳು ನೀಡಿದ ಶೈಕ್ಷಣಿಕ ದಾಖಲೆಗಳ ಆಧಾರದ ಮೇಲೆ ಪರಿಷ್ಕರಿಸಿ ಪುನಃ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

**22. ತಾತ್ಕಾಲಿಕ ಆಯ್ಕೆ ಪಟ್ಟಿ:–**

ಕಂಡಿಕೆ 21ರಲ್ಲಿ ನೀಡಿರುವ ಸೂಚನೆಯಂತೆ ಅಭ್ಯರ್ಥಿಗಳ ಆಕ್ಷೇಪಣೆಗಳನ್ನು ಸ್ವೀಕರಿಸಿ ಪರಿಷ್ಕೃತ ವಿವರ ಪ್ರಕಟಿಸಿದ ನಂತರ ವಿಷಯವಾರು, ಹುದ್ದೆವಾರು ಮೀಸಲಾತಿ ಹಾಗೂ ಅನುಗುಣವಾಗಿ ಅಗತ್ಯ ಪ್ರಮಾಣದ ಅಭ್ಯರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಲು ನಿಗದಿತ ದಿನಾಂಕ ಮತ್ತು ಸ್ಥಳದಲ್ಲಿ ಮೂಲ ದಾಖಲಾತಿಗಳೊಂದಿಗೆ ಹಾಜರಾಗಲು ಸೂಚಿಸುವ ಮಾಹಿತಿಯನ್ನು ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುವುದು. ಸಂಬಂಧಿಸಿದ ಅಭ್ಯರ್ಥಿಗಳು ಪ್ರಕಟಿತ ದಿನಾಂಕಗಳಲ್ಲಿ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ/ಆಯ್ಕೆ ಬಯಸಿರುವ ಎಲ್ಲಾ ಹುದ್ದೆಗಳಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸುವುದು ಹಾಗೂ ಒಂದು ಸೆಟ್ ಮೂಲ ಪ್ರತಿಗಳ ಛಾಯಾ ಪ್ರತಿಗಳನ್ನು ಅಭ್ಯರ್ಥಿಗಳು ಸ್ವಯಂ ದೃಢೀಕರಿಸಿ ಪರಿಶೀಲನಾಧಿಕಾರಿಗಳಿಗೆ ನೀಡಿ ಸ್ವೀಕೃತಿ ಪಡೆಯುವುದು. ನಿಗದಿಪಡಿಸಿದ ದಿನಾಂಕಗಳಲ್ಲಿ ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆಗೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಾಜರಾಗದಿದ್ದಲ್ಲಿ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ. 1:2ರ ಅನುಪಾತದಲ್ಲಿ ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದು.

**23. ನಿಬಂಧನೆಗಳು:–**

1. ಅಭ್ಯರ್ಥಿಯು ಆನ್‌ಲೈನ್ ಮೂಲಕ ಸಲ್ಲಿಸಲ್ಪಟ್ಟ ಮೂಲ ಅರ್ಜಿಯಲ್ಲಿ ನೀಡಿರುವ ಮಾಹಿತಿಗಳ ಬದಲಾವಣೆಗೆ ಯಾವುದೇ ಹಂತದಲ್ಲೂ ಅವಕಾಶವಿರುವುದಿಲ್ಲ. ಆದುದರಿಂದ ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅರ್ಹತೆ, ಮೀಸಲಾತಿ ಹಾಗೂ ಇತರೆ ವಿವರಗಳ ಬಗ್ಗೆ ಖಾತ್ರಿ ಪಡಿಸಿಕೊಂಡು ವಿವರಗಳನ್ನು ದಾಖಲಿಸುವುದು ಅಭ್ಯರ್ಥಿಗಳ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ.
2. ಅಭ್ಯರ್ಥಿಯು ಕೋರುವ ಮೀಸಲಾತಿ ಮತ್ತು ಇತರೆ ಯಾವುದೇ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಎಲ್ಲಾ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಅರ್ಜಿ ಸಲ್ಲಿಸಲು ನಿಗಧಿ ಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು. ಸದರಿ ಮೂಲ ಪ್ರಮಾಣ ಪತ್ರಗಳನ್ನು ಆಯ್ಕೆ ಪ್ರಾಧಿಕಾರ/ ನೇಮಕಾತಿ ಪ್ರಾಧಿಕಾರ ಸೂಚಿಸಿದ ದಿನದಂದು ಪರಿಶೀಲನೆಗೆ ಹಾಜರುಪಡಿಸಬೇಕು. ಒಂದು ವೇಳೆ ಯಾವುದೇ ಪ್ರಮಾಣ ಪತ್ರಗಳನ್ನು ಹಾಜರು ಪಡಿಸಲು ವಿಫಲರಾದಲ್ಲಿ ಅಂತಹ ಮೀಸಲಾತಿಯನ್ನು ರದ್ದುಪಡಿಸಲಾಗುವುದು.
3. ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಸಮಯದಲ್ಲಿ ಯಾವುದೇ ಸರ್ಕಾರಿ ಇಲಾಖೆಯಲ್ಲಿ ಖಾಯಂ ಅಥವಾ ಹಂಗಾಮಿಯಾಗಿ ನೌಕರಿಯಲ್ಲಿದ್ದರೆ ಅವನು/ಅವಳು ತಾನು ಸೇವೆ ಸಲ್ಲಿಸುತ್ತಿರುವ ಹುದ್ದೆಯ ನೇಮಕಾತಿ ಪ್ರಾಧಿಕಾರಿಯವರ ಸಮ್ಮತಿಯಿಲ್ಲದೆ ಅರ್ಜಿಯನ್ನು ಸಲ್ಲಿಸಿದ್ದರೆ, ಅಂತಹ ಅಭ್ಯರ್ಥಿ ನೇಮಕಾತಿಗೆ ಅರ್ಹರಾಗುವುದಿಲ್ಲ. ಆದುದರಿಂದ ಸೇವೆಯಲ್ಲಿರುವ ಅಭ್ಯರ್ಥಿಗಳು ಸೇವೆಯಲ್ಲಿರುವ ಬಗ್ಗೆ ಸೇವಾ ಪ್ರಮಾಣ ಪತ್ರ ಮತ್ತು ಸದರಿ ಪ್ರಸ್ತುತ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ ಸಂಬಂಧಿದ ನೇಮಕಾತಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರಬೇಕು.

4. ಅರ್ಜಿ ನಮೂನೆ, ಉತ್ತರ ಪತ್ರಿಕೆ, ಪ್ರವೇಶ ಪತ್ರಗಳ ನಿಗದಿತ ಸ್ಥಳಗಳಲ್ಲಿ ಎಡಗೈ ಹೆಬ್ಬೆಟ್ಟು ಗುರುತನ್ನು ಸ್ಪಷ್ಟವಾಗಿ ಹಾಕಬೇಕು. ಎಡಗೈ ಹೆಬ್ಬೆರಳ ಗುರುತು ರಹಿತ ಅರ್ಜಿಯನ್ನು ಯಾವುದೇ ಸೂಚನೆ ನೀಡದೇ ತಿರಸ್ಕರಿಸಲಾಗುವುದು.
5. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ಪ್ರವೇಶ ಪತ್ರದ ಪ್ರತಿಯನ್ನು ದ್ವಿಪ್ರತಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬೇಕು.

**24. ನ್ಯಾಯಾಲಯದ ವ್ಯಾಪ್ತಿ:–**

**ನೇಮಕಾತಿಗೆ ಸಂಬಂಧಿಸಿದಂತೆನ್ಯಾಯಾಲಯದ ಪ್ರಕರಣ ದಾಖಲಾದ್ದಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಬೆಂಗಳೂರು ಇವರು ಪ್ರತಿಸ್ಪಂದಿಸುವ ಅಧಿಕಾರಿಗಳಾಗಿರುತ್ತಾರೆ.**

**25. ಸೂಚನೆಗಳು:–**

ಯಾವುದೇ ವ್ಯಕ್ತಿಯು ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ನೇರನೇಮಕಾತಿಗೆ ಈ ಕೆಳಕಂಡ ಸಂದರ್ಭದಲ್ಲಿ ಅರ್ಹನಾಗುವುದಿಲ್ಲ.

1. ಯಾವುದೇ ನಿಷೇಧಿತ ಸಂಘ ಸಂಸ್ಥೆಯ ಸದಸ್ಯನಾಗಿರುವಲ್ಲಿ ಅಥವಾ ಸದಸ್ಯರಾಗಿದ್ದಲ್ಲಿ ಅಥವಾ ಯಾವುದೇ ನಿಷೇಧಿತ ಸಂಸ್ಥೆಯ ಕಾರ್ಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲಿ.
2. ಭಾರತ ಸಂವಿಧಾನಕ್ಕೆ ಚ್ಯುತಿ ತರುವ ಕಾರ್ಯದಲ್ಲಿ ಪ್ರವೃತ್ತನಾದಲ್ಲಿ.
3. ಕಾನೂನು ಭಂಗ ಮಾಡಿ ಹಿಂಸಾಕೃತ್ಯದಲ್ಲಿ ತೊಡಗಿದವರಾಗಿದ್ದರೆ.
4. ಭಾರತ ದೇಶದ ಸಾರ್ವಭೌಮತೆ ಹಾಗೂ ಸುಭದ್ರತೆಗೆ ಧಕ್ಕೆ ತರುವ ಕಾರ್ಯದಲ್ಲಿ ಪ್ರವೃತ್ತರಾಗಿದ್ದರೆ.
5. ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಸೇವೆಯಿಂದ ಉಚ್ಚಾಟನೆಗೊಂಡ ಪ್ರಸಂಗಗಳಲ್ಲಿ
6. ನ್ಯಾಯ ಬಾಹೀರ ಕೃತ್ಯಗಳಲ್ಲಿ ತೊಡಗಿ ಅಪರಾಧಕ್ಕೆ ಒಳಗಾದ ಪ್ರಸಂಗಗಳಲ್ಲಿ.
7. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಮತ್ತು ಈಗಾಗಲೇ ಇನ್ನೊಂದು ಹೆಂಡತಿಯಿರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.
8. ಅಭ್ಯರ್ಥಿಯು ಮತ್ತೊಬ್ಬ ವ್ಯಕ್ತಿಯಂತೆ ನಟಿಸಿ ವಂಚಿಸಿದ ಅಥವಾ ದಾಖಲೆಗಳನ್ನು ತಿದ್ದಿದ ಅಥವಾ ಸೃಷ್ಟಿಸಿದ ಅಥವಾ ಸರಿಯಲ್ಲದ ಅಥವಾ ಸುಳ್ಳು ಅಥವಾ ದೋಷಪೂರ್ಣ ವಿವರಗಳನ್ನು ನೀಡುವ ಅಥವಾ ನೇಮಕಾತಿಗಾಗಿ ನಡೆಸುವ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅನುಚಿತ ರೀತಿಯಲ್ಲಿ ವರ್ತಿಸುವ ಅಥವಾ ವರ್ತಿಸಲು ಪ್ರಯತ್ನಿಸಿದ ಅಥವಾ ಅವನ/ ಅವಳ ನೇಮಕಾತಿಗಾಗಿ ಸಂಬಂಧಿಸಿದಂತೆ ಯಾವುದೇ ಇತರೆ ಅಕ್ರಮ ಅನುಚಿತ ವಿಧಾನಗಳನ್ನು ಅನುಸರಿಸಿದ ಕಾರಣದಿಂದಾಗಿ ತಪ್ಪಿತಸ್ಥನೆಂದು ಕಂಡು ಬಂದಲ್ಲಿ ಅವನ /ಅವಳ ಅಭ್ಯರ್ಥಿ

ತನವನ್ನು ಯಾವುದೇ ಸೂಚನೆ ನೀಡದೇ ರದ್ದುಗೊಳಿಸಲಾಗುವುದು ಮತ್ತು ಅಂತಹವರನ್ನು ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು.

9. ಆಯ್ಕೆ ಪ್ರಾಧಿಕಾರಿಯು ನಡೆಸುವ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಅರ್ಹತಾ ಪರೀಕ್ಷೆಗಳಲ್ಲಿ ಪಡೆದಿರುವ ಅಂಕಗಳು **50:50** ಅನುಪಾತದ ಆಧಾರದ ಮೇಲೆ ಆಯ್ಕೆ ಮಾಡಿದ ಆಯ್ಕೆ ಪಟ್ಟಿಯಲ್ಲಿ ಅವನ /ಅವಳ ಆಯ್ಕೆಯು ಖಾಯಂ ಆಗದ ಹೊರತು ನೇಮಕಾತಿಗಾಗಿ ಹಕ್ಕನ್ನು ಪಡೆದುಕೊಳ್ಳುವುದಿಲ್ಲ.

10. ಈ ನೇಮಕಾತಿಯು, ಮತ್ತು ಈ ಅಧಿಸೂಚನೆಯಲ್ಲಿ ತಿಳಿಸಿರುವ ಆದೇಶಗಳು, ಜ್ಞಾಪನಗಳು, ಸುತ್ತೋಲೆಗಳು ಕಾಲದಿಂದ ಕಾಲಕ್ಕೆ ಹೊರಡಿಸಿರುವ ಆದೇಶಗಳು ಮತ್ತು ತಿದ್ದುಪಡಿಗೆ ಒಳಪಟ್ಟಿರುತ್ತದೆ.

11. ಆಯ್ಕೆ ಮತ್ತು ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಆಯ್ಕೆಗೆ ಪರಿಗಣಿಸಿರುವ ಅಂಶಗಳ ಬಗ್ಗೆ ವ್ಯತ್ಯಾಸ ಕಂಡು ಬಂದಲ್ಲಿ ಅಥವಾ ಆಕ್ಷೇಪಣೆ ಸಲ್ಲಿಕೆಯಾದಲ್ಲಿ, ಕೋರ್ಟಿನ ತೀರ್ಮಗಳು, ಇಲಾಖೆ ಸುತ್ತೋಲೆಗಳು, ಸರಕಾರದ ನಿರ್ದೇಶನಗಳು ಬಂದಲ್ಲಿ ಪ್ರಕಟಿಸಿರುವ ಪಟ್ಟಿಗಳಲ್ಲಿ ಸೂಕ್ತ ಬದಲಾವಣೆ ಮಾಡಿ ಆಯ್ಕೆ ಪಟ್ಟಿ ಪರಿಷ್ಕರಿಸುವ ಅಧಿಕಾರವನ್ನು ಆಯ್ಕೆ ಪ್ರಾಧಿಕಾರ ಹೊಂದಿರುತ್ತದೆ.

12. ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಈ ಸಂಬಂಧ ಆಯ್ಕೆ ಪ್ರಾಧಿಕಾರಿ/ನೇಮಕಾತಿ ಪ್ರಾಧಿಕಾರಿಗಳು ನೀಡುವ ಸೂಚನೆಗಳನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ www.schooleducation.kar.nic.in ಅವಲೋಕಿಸುವುದು.

**ಆಯ್ಕೆ ಪ್ರಾಧಿಕಾರಿ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ,**
**ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಬೆಂಗಳೂರು**